ದಿ:20-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರಿದ ಪಾಟಿಸವಾಲು : ಅರ್ಜಿದಾರರ ಪರ ಶ್ರೀ. ಆರ್.ಸಿ.ಎಸ್ ವಕೀಲರಿಂದ :

13. ನನ್ನ ಸಹೋದರಿ ಮಾಲಾ ತೀರಿಹೋದ ನಂತರ ಅವರ ಗಂಡ ಹಾಗೂ ಮಕ್ಕಳನ್ನು ಈ ಅರ್ಜಿಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿ. ಮಾಲಾ ಅವರ ಗಂಡ ಕಮಲೇಶ್ ಈ ದಿನ ನ್ಯಾಯಾಲಯದ ಎದುರು ಉಪಸ್ಥಿತರಿದ್ದಾರೆ. ಅದೇ ರೀತಿ ದಿನಾಂಕ 03.01.2026 ರಂದೂ ಸಹ ಅವರು ನ್ಯಾಯಾಲಯದ ಎದುರು ಉಪಸ್ಥಿತರಿದ್ದರು.

14. ನಿ.ಆರ್.79 ರ ಕ್ರಯ ಪತ್ರದ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ಅಥವಾ ನನ್ನ ತಕರಾರು ಪತ್ರದಲ್ಲಾಗಲೀ ಯಾವುದೇ ಉಲ್ಲೇಖ ಇಲ್ಲ ಎಂದರೆ ನನಗೆ ಗೊತ್ತಾಗುತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನಿ.ಆರ್.79 ಕ್ಕೂ ಹಾಗೂ ಈ ಅರ್ಜಿಗೂ ಯಾವುದೇ ಸಂಬಂಧ ಇಲ್ಲ ಮತ್ತು ನಾನು ಯಾವುದೇ ಕಾರಣವಿಲ್ಲದೆ ಅದನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

15. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.7 ರಲ್ಲಿ ಉಲ್ಲೇಖಿಸಿದ ದಿನಾಂಕ 05.10.1984 ರ ವಿಭಾಗ ಪತ್ರವನ್ನು ನಾನು ಓದಿದ್ದೇನೆ. ಸದರಿ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.7 ಹಾಗೂ 28 ರಲ್ಲಿ ಸದರಿ ವಿಭಾಗ ಪತ್ರವನ್ನು ನಾನು ನೋಂದಾಯಿತ

ವಿಭಾಗ ಪತ್ರ ಎಂದು ಹೇಳಿದ್ದು ಅದು ನೋಂದಣಿಯಾಗಿಲ್ಲ ಎಂದರೆ ಸರಿಯಲ್ಲ. ದಿನಾಂಕ 05.10.1984 ರ ವಿಭಾಗ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

16. ನನ್ನ ತಂದೆಯ ಮರಣಾನಂತರ 2015 ರವರೆಗೆ ನಾನು ಯಾವುದೇ ವಾಹನಗಳನ್ನು ಖರೀದಿಸಿಲ್ಲ. 2015 ರಿಂದ ಇಲ್ಲಿಯವರೆಗೂ ವಾಹನಗಳನ್ನು ಎದುರುದಾರರು ಖರೀದಿಸಿದ್ದಾರೆ. ನಾನು ಖರೀದಿ ಮಾಡಿದ್ದೇನೆ ಎಂದು ಹೇಳುವ ವಾಹನಗಳನ್ನು ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿ ಮಾಡಿಲ್ಲ. ಆ ಕಾರಣದಿಂದ ಯಾವುದೇ ವಾಹನಗಳನ್ನು ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. 2015 ರ ಮೊದಲು ಒಟ್ಟು ಕುಟುಂಬದ ಆಸ್ತಿಯಿಂದ ಖರೀದಿಸಿದ ವಾಹನಗಳ ವಿವರಗಳನ್ನು ನನ್ನ ತಕರಾರಿನಲ್ಲಿ ಹೇಳಿಲ್ಲ. ಅದೇ ರೀತಿ ಯಾವುದೇ ವಾಹನಗಳನ್ನು ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. 2001 ನೇ ಇಸವಿಯಲ್ಲಿ ನನ್ನ ತಮ್ಮ ಹೇಮಂತ್ ಒಂದು ಟೊಯೋಟ ಕ್ವಾಲಿಸ್ ವಾಹನವನ್ನು ಖರೀದಿಸಿದ್ದರು ಎಂದರೆ ಸಾಕ್ಷಿ ಅದನ್ನು ಕುಟುಂಬದ ಹಣದಿಂದಲೇ ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. 2001 ರಲ್ಲಿ ಅರ್ಜಿದಾರರ ನನ್ನ ತಂದೆ ಬದುಕಿರುವ ಸಂದರ್ಭದಲ್ಲೇ ಅರ್ಜಿದಾರರ ಸ್ವಂತ ದುಡಿಮೆಯಿಂದ ಸದರಿ ವಾಹನವನ್ನು ಖರೀದಿಸಿದ್ದರು ಎಂದರೆ ಸರಿಯಲ್ಲ. ಸದರಿ ವಾಹನ ಈಗ ನನ್ನ ಸ್ವಾಧೀನದಲ್ಲಿದೆ ಎಂದರೆ ಸರಿ. ಅದರ ಫಿಟ್‌ನೆಸ್ ಸರ್ಟಿಫಿಕೇಟ್‌ನ ಅವಧಿ ಮುಗಿದಿದೆ ಎಂದರೆ ಸರಿ. ಅದನ್ನು ನಮ್ಮ ಮನೆಯ ಹೊರಗಡೆ

ನಿಲ್ಲಿಸಿದ್ದೇವೆ ಎಂದರೆ ಸರಿ. ಸದರಿ ವಾಹಣ ಹೇಮಂತ್ ಅವರ ಸ್ವಯಾರ್ಜಿತ ಆದ ಕಾರಣ ನಾನು ಅದನ್ನು ಮನೆಯ ಹೊರಗಡೆ ಇಟ್ಟಿದ್ದೇನೆ ಮತ್ತು ನೋಡಿಕೊಳ್ಳುತ್ತಿಲ್ಲ ಮುಂದುವರಿದು ಅದರ ಫಿಟ್‌ನೆಸ್ ಸರ್ಟಿಫಿಕೇಟನ್ನು ನವೀಕರಣ ಮಾಡಿಲ್ಲ ಎಂದರೆ ಸಾಕ್ಷಿ ನವೀಕರಣ ಮಾಡಿಲ್ಲ ಎಂದು ನುಡಿಯುತ್ತಾರೆ.

17. ದಿನಾಂಕ 05.10.1984 ರಂದು ವಿಭಾಗ ಪತ್ರ ಆಗುವ ಸಂದರ್ಭದಲ್ಲಿ ನನ್ನ ತಂದೆಗೆ ಯಾವುದೇ ಬಾಡಿಗೆ ಬರುತ್ತಿರಲಿಲ್ಲ ಎಂದರೆ ಸರಿ. ನನ್ನ ತಂದೆ ತೀರಿಹೋಗುವ ಸಂದರ್ಭದಲ್ಲಿ ಎಷ್ಟು ಬಾಡಿಗೆ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ತಿಂಗಳಿಗೆ ಸುಮಾರು 5-6 ಲಕ್ಷ ಬಂದಿರಬಹುದು ಎಂದು ನುಡಿಯುತ್ತಾರೆ. ತಿಂಗಳಿಗೆ ಸುಮಾರು 5-6 ಲಕ್ಷ ರೂಪಾಯಿ ಬಾಡಿಗೆ ಬರುತ್ತಿತ್ತು ಎಂದು ಹೇಳಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಆದರೆ ಅಷ್ಟು ಬಾಡಿಗೆ ಬರುತ್ತಿತ್ತು ಎಂದು ಹೇಳಲು ನಾನು ಬಾಡಿಗೆ ಕರಾರು ಪತ್ರ ನೋಡಿದ್ದೇನೆ. ನನ್ನ ತಂದೆ ಈ ಬಗ್ಗೆ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರು. ನನ್ನ ತಂದೆಗೆ ತಿಂಗಳಿಗೆ 5-6 ಲಕ್ಷ ರೂಪಾಯಿಗಳಷ್ಟು ಬಾಡಿಗೆ ಬರುತ್ತಿರಲಿಲ್ಲ ಮತ್ತು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಸ್ವತ್ತು ನಂ.9/1, 9/4, 9/11, 9/22 ಮತ್ತು 11/21 ರಲ್ಲಿ ಬಾಡಿಗೆ ಬರುತ್ತಿತ್ತು. ಮೇಲೆ ಹೇಳಿದ ಸ್ವತ್ತುಗಳಲ್ಲಿ ನನ್ನ ತಂದೆ ಯಾವಾಗ ಕಟ್ಟಡ ಕಟ್ಟಿಸಿದ್ದರು, ಯಾವಾಗ ಬಾಡಿಗೆ ಕೊಟ್ಟಿದ್ದರು ಮತ್ತು ಎಷ್ಟೆಷ್ಟು ಬಾಡಿಗೆ

ಬರುತ್ತಿತ್ತು ಎಂದರೆ ಸಾಕ್ಷಿ 1984 ರಿಂದ ಕಟ್ಟಡ ಕಟ್ಟುತ್ತಿದ್ದು 1985 ರಿಂದ ಬಾಡಿಗೆ ಶುರುವಾಗಿತ್ತು. ಆ ಬಳಿಕ ಉಳಿದ ಸ್ವತ್ತುಗಳಲ್ಲಿ ಕಟ್ಟಡ ಕಟ್ಟಲು ಪ್ರಾರಂಭಿಸಿದ್ದರು. 1984 ರಲ್ಲಿ ಕಟ್ಟಡ ಕಟ್ಟುವ ಸಂದರ್ಭದಲ್ಲಿ ನನ್ನ ತಂದೆ ಸಾಲ ತೆಗೆದುಕೊಂಡಿರಲಿಲ್ಲ.

19. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.18 ಹಾಗೂ 19 ರಲ್ಲಿ ಹೇಳಿದ ಜಾಗಗಳನ್ನು ಖರೀದಿಸಲು ನಮ್ಮ ಮನೆಯಲ್ಲಿ ಎಲ್ಲರೂ ಕುಳಿತು ಚರ್ಚೆ ಮಾಡಿ ಆ ಬಳಿಕ ತೆಗೆದುಕೊಂಡಿದ್ದರು. ನನ್ನ ತಾಯಿ ಹಾಗೂ ತಮ್ಮ ಕುಳಿತು ಚರ್ಚೆ ಮಾಡಿ ಪ್ಯಾರಾ ನಂ.18 ಹಾಗೂ 19 ರಲ್ಲಿ ಹೇಳಿದ ಜಾಗಗಳನ್ನು ಖರೀದಿಸಬೇಕು ಎಂದು ತೀರ್ಮಾನಿಸಿದ್ದರು ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.18 ಹಾಗೂ 19 ರಲ್ಲಿ ಉಲ್ಲೇಖಿಸಿದ ಜಾಗಗಳನ್ನು ನಾವು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದೇವೆ ಎಂದು ಹೇಳಿದ್ದು ಆ ಬಗ್ಗೆ ಕ್ರಯ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಕ್ರಯ ಪತ್ರಗಳಲ್ಲಿ ಸದರಿ ಆಸ್ತಿಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂಬ ಬಗ್ಗೆ ಉಲ್ಲೇಖ ಇಲ್ಲ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ಯಾರಾ ನಂ.18 ಹಾಗೂ 19 ರಲ್ಲಿ ಉಲ್ಲೇಖಿಸಿದ ಜಾಗಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿದೆ ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡೂ ಆಸ್ತಿಗಳನ್ನು ನನ್ನ ತಂದೆ

ತೀರಿಹೋದ ನಂತರ ಖರೀದಿಸಿದ್ದೆವು ಎಂದರೆ ಸರಿ. ನನ್ನ ತಾಯಿಯ ಮಾತಿನಂತೆ ಮೇಲೆ ಹೇಳಿದ ಎರಡೂ ಸ್ವತ್ತುಗಳನ್ನು ಖರೀದಿಸಲು ನನ್ನ ತಮ್ಮ ಸಹ ಹಣ ಪಾವತಿ ಮಾಡಿದ್ದರು ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ಯಾರಾ ನಂ.18 ಹಾಗೂ 19 ರಲ್ಲಿ ಹೇಳಿದ ಎರಡೂ ಜಾಗಗಳನ್ನು ನಾನೂ ಹಾಗೂ ನನ್ನ ತಮ್ಮ ನಮ್ಮ ಸ್ವಂತ ಹಣದಿಂದ ಖರೀದಿಸಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನನ್ನ ತಾಯಿಯ ಬಳಿ ಇದ್ದ ಹಣವನ್ನೂ ಸಹ ಉಪಯೋಗಿಸಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಜಾಗಗಳನ್ನು ಖರೀದಿಸಲು ನನ್ನ ತಾಯಿ ಸಹ ಹಣವನ್ನು ನೀಡಿದ್ದಾರೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

20. ನಿ.ಆರ್.31 ಹಾಗೂ 33 ಕ್ಕೂ ಏನು ವ್ಯತ್ಯಾಸ ಎಂದರೆ ಸಾಕ್ಷಿ ಎರಡೂ ಒಂದೇ ದಾಖಲೆ ಎಂದು ನುಡಿಯುತ್ತಾರೆ. ನನ್ನ ತಂದೆ ಹಿರೇಹಳ್ಳಿ ಗ್ರಾಮದ ಸರ್ವೇ ನಂ.8 ಹಾಗೂ 9 ನ್ನು 1989 ರಲ್ಲಿ ಖರೀದಿಸಿದ್ದರು. ಸರ್ವೇ ನಂ.8 ನ್ನು ಖರೀದಿಸಲು ನನ್ನ ತಂದೆ ಎಕರೆಗೆ ರೂ.52,000/-ಗಳನ್ನು ಪಾವತಿಸಿದ್ದರು. ಅದೇ ರೀತಿ ಸರ್ವೇ ನಂ.9 ನ್ನು ಖರೀದಿಸಲು ನನ್ನ ತಂದೆ ಎಕರೆಗೆ ರೂ.52,000/-ಗಳನ್ನು ಪಾವತಿಸಿದ್ದರು. ಸದರಿ ಜಾಗಗಳನ್ನು ಖರೀದಿಸಿದ ನಂತರ ನನ್ನ ತಂದೆ ಅದನ್ನು ಭೂಪರಿವರ್ತನೆ ಮಾಡಿದ್ದರು. ಸರ್ವೇ ನಂ.8 ಹಾಗೂ 9 ರ ಖಾತಾ ಎಲ್ಲಾ ಪ್ರತಿವಾದಿಗಳ ಹೆಸರಿನಲ್ಲಿದೆ ಎಂದರೆ ಸರಿ. ಸರ್ವೇ ನಂ.84/3 ಎ ಮತ್ತು ಸರ್ವೇ ನಂ.95 ಎರಡೂ ಹಿರೇಹಳ್ಳಿ ಗ್ರಾಮ ಹಾಗೂ ಒಂದೇ

ಪಂಚಾಯತಿಗೆ ಸೇರಿದ್ದು ಎಂದರೆ ಸರಿ. ಸರ್ವೇ ನಂ.84/3 ಎ ಮತ್ತು ಸರ್ವೇ ನಂ.95 ರ ಖಾತೆಗಳನ್ನು ಜಂಟಿ ಖಾತೆ ಮಾಡಿಸಿಲ್ಲ ಎಂದರೆ ಸರಿ. ಸರ್ವೇ ನಂ.84/3 ಎ ಮತ್ತು ಸರ್ವೇ ನಂ.95 ನನ್ನ ಹಾಗೂ ನನ್ನ ತಮ್ಮನ ಸ್ವಯಾರ್ಜಿತ ಆಸ್ತಿಯಾದ ಕಾರಣ ಜಂಟಿ ಖಾತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. 2004 ನೇ ಇಸವಿಯಲ್ಲಿ ನನ್ನ ತಂದೆ ತೀರಿಹೋದ ನಂತರ ನಾನು ನನ್ನ ತಂದೆಯ ಹೆಸರಿನಲ್ಲಿರುವ ಜಾಗಗಳನ್ನು ಜಂಟಿ ಖಾತೆ ಮಾಡಿಸಿದ್ದೇನೆ ಮತ್ತು ನನ್ನ ತಮ್ಮ ಮತ್ತು ನನ್ನ ಹೆಸರಿನಲ್ಲಿರುವ ಜಾಗಗಳನ್ನು ಜಂಟಿ ಖಾತೆ ಮಾಡಿಸಿಲ್ಲ ಎಂದರೆ ಸರಿ.

21. 1984 ರ ವಿಭಾಗ ಪತ್ರದಲ್ಲಿ ನನ್ನ ತಂದೆಗೆ ಯಾವೆಲ್ಲಾ ಆಸ್ತಿಗಳು ಬಂದಿದ್ದವು ಎಂದು ನನಗೆ ಗೊತ್ತಿದೆ. ನನ್ನ ತಂದೆ ಅವರ ಮೂರೂ ಜನ ಹೆಣ್ಣು ಮಕ್ಕಳನ್ನು ಕಟ್ಟುನಿಟ್ಟಾಗಿ ಬೆಳೆಸಿದ್ದರು ಎಂದರೆ ಸರಿ. ನನ್ನ ತಂದೆ ಅವರ ಮೂರೂ ಜನ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಎಸ್.ಎಸ್.ಎಲ್.ಸಿ ನಂತರ ಮುಂದುವರಿಸಿರಲಿಲ್ಲ ಎಂದರೆ ಸರಿ. ಸದರಿ ಮೂರೂ ಜನ ಹೆಣ್ಣು ಮಕ್ಕಳ ವಿವಾಹವನ್ನು ಎಳೆ ವಯಸ್ಸಿನಲ್ಲೇ ಮಾಡಿದ್ದರು ಎಂದರೆ ಸರಿಯಲ್ಲ. ವಿಜಯಾ ಅವರ ಮದುವೆಯನ್ನು 1983 ರಲ್ಲಿ, ತ್ರಿವೇಣಿಯವರ ಮದುವೆಯನ್ನು 1984 ರಲ್ಲಿ ಹಾಗೂ ಮಾಲಾ ಅವರ ಮದುವೆಯನ್ನು 1996 ರಲ್ಲಿ ಮಾಡಿದ್ದರು ಎಂದರೆ ಸರಿ. ಮೂರೂ ಜನ ಹೆಣ್ಣು ಮಕ್ಕಳ ವಿವಾಹವನ್ನು ವಿಜ್ರಂಭಣೆಯಿಂದ ಮಾಡಿದ್ದರು ಎಂದರೆ ಸರಿ. ವಿಜಯಾ ಹಾಗೂ ತ್ರಿವೇಣಿಯವರ ಮದುವೆಯನ್ನು 100*100 ರ ಸೈಟಿನಲ್ಲಿ ವಿಜ್ರಂಭಣೆಯಿಂದ ಮಾಡಿದ್ದರು ಎಂದರೆ ಸರಿ.

22. ವಿಜಯಾ ಅವರನ್ನು ನನ್ನ ತಾಯಿಯ ತಮ್ಮ ಹನುಮಂತಯ್ಯನವರಿಗೆ ವಿವಾಹ ಮಾಡಲಾಗಿತ್ತು ಎಂದರೆ ಸರಿ. ಹನುಮಂತಯ್ಯನವರು ಕೇವಲ ಎಸ್.ಎಸ್.ಎಲ್.ಸಿ ಪಾಸಾಗಿದ್ದರು. ಮದುವೆಯಾಗುವ ಸಂದರ್ಭದಲ್ಲಿ ಹನುಮಂತಯ್ಯನವರಿಗೆ ಯಾವುದೇ ಕೆಲಸ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಮದುವೆಯಾಗುವ ಸಂದರ್ಭದಲ್ಲಿ ಹನುಮಂತಯ್ಯನವರಿಗೆ ಯಾವುದೇ ಕೆಲಸ ಇದ್ದಿರಲಿಲ್ಲ ಮತ್ತು ಮದುವೆಯಾದ ನಂತರ ನನ್ನ ತಂದೆ ಅವರಿಗೆ ಪೊಲೀಸ್ ಇಲಾಖೆಯಲ್ಲಿ ಕೆಲಸ ಮಾಡಿಸಿಕೊಟ್ಟಿದ್ದರು ಎಂದರೆ ಸಾಕ್ಷಿ ಮದುವೆಯಾಗುವ ಸಂದರ್ಭದಲ್ಲಿ ಅವರು ದಿನಗೂಲಿ ಆಧಾರದಲ್ಲಿ ಬಿ.ಹೆಚ್.ಇ.ಎಲ್.ನಲ್ಲಿ ಕೆಲಸ ಮಾಡುತ್ತಿದ್ದರು ಆ ಬಳಿಕ ನನ್ನ ತಂದೆ ಅವರಿಗೆ ಕೆಲಸ ಮಾಡಿಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಮದುವೆಯಾಗುವ ಸಂದರ್ಭದಲ್ಲಿ ಹನುಮಂತಯ್ಯನವರಿಗೆ ಯಾವುದೇ ಕೆಲಸ ಇದ್ದಿರಲಿಲ್ಲ ಮತ್ತು ಆ ಕಾರಣದಿಂದ ನನ್ನ ತಂದೆ ಮದುವೆಯಾದ ಬಳಿಕ ಅವರಿಗೆ ಕೆಲಸ ಮಾಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ.

23. ವಿಜಯಾ ಅವರಿಗೆ ನನ್ನ ತಂದೆ ಸ್ವತ್ತು ನಂ.58/1-1 ಮತ್ತು 14/1 ರ ಎರಡು ಸೈಟುಗಳನ್ನು ಸರ್ವೇ ನಂ.3 ರಲ್ಲಿ ನೀಡಿದ್ದರು ಎಂದರೆ ಸರಿ. ಸ್ವತ್ತು ನಂ.58/1-1 ರಲ್ಲಿ ನನ್ನ ತಂದೆ ವಿಜಯಾ ಅವರಿಗೆ ಒಂದು ಮನೆಯನ್ನು ಕಟ್ಟಿಸಿಕೊಟ್ಟಿದ್ದರು ಎಂದರೆ ಸರಿ. ಅವರು ಅಲ್ಲಿ ವಾಸವಿದ್ದರು ಎಂದರೆ ಸರಿ. ಸೈಟ್ ನಂ.14/1 ರಲ್ಲಿ ನನ್ನ ತಂದೆ ವಿಜಯಾ

ಅವರಿಗೆ 3 ಅಂತಸ್ತಿನ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದು ಅದರಿಂದ ಸಾಕಷ್ಟು ಬಾಡಿಗೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಬರೀ 1 ನೇ ಮಹಡಿಯನ್ನು ಕಟ್ಟಿಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಅದನ್ನು ಅವರು ಬಾಡಿಗೆಗೆ ಕೊಟ್ಟಿದ್ದಾರೆ ಎಂದರೆ ಸರಿ.

24. ತ್ರಿವೇಣಿಯವರನ್ನು ಮಾಸ್ತಿಗೌಡರ ಅಕ್ಕ ಗಂಗಮ್ಮ ಅವರ ಮಗ ರಾಮಯ್ಯ ಅವರಿಗೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ಮದುವೆ ಸಂದರ್ಭದಲ್ಲಿ ರಾಮಯ್ಯ ಅವರು ಒಂದು ಫ್ಯಾಕ್ಟರಿಯಲ್ಲಿ ತಿಂಗಳ ಸಂಬಳಕ್ಕೆ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಮದುವೆಯ ಸಂದರ್ಭದಲ್ಲಿ ರಾಮಯ್ಯ ಅವರು ದಾಸರಹಳ್ಳಿಯಲ್ಲಿ ಒಂದು ಚಿಕ್ಕ ಮನೆಯಲ್ಲಿ ಅವರ ತಾಯಿ, ಅಣ್ಣ, ಅತ್ತಿಗೆಯವರ ಜೊತೆ ವಾಸವಾಗಿದ್ದರು ಎಂದರೆ ಮನೆ ದೊಡ್ಡದಿತ್ತು ಎಂದು ಸಾಕ್ಷಿ ನುಡಿಯುತ್ತಾರೆ. ಆದರೆ ಎಲ್ಲರೂ ಒಟ್ಟಿಗೆ ವಾಸಿಸುತ್ತಿದ್ದರು. ರಾಮಯ್ಯ ಅವರು 3 ನೇ ತರಗತಿ ಪಾಸಾಗಿದ್ದರು ಎಂದರೆ ಸಾಕ್ಷಿ 7 ನೇ ತರಗತಿ ಪಾಸಾಗಿದ್ದರು ಎಂದು ನುಡಿಯುತ್ತಾರೆ.

25. ತ್ರಿವೇಣಿಯವರಿಗೆ ನನ್ನ ತಂದೆ ಸೈಟ್ ನಂ.54 ಹಾಗೂ 14 ನ್ನು ಸರ್ವೇ ನಂ.3 ರಲ್ಲಿ ಸೈಟುಗಳನ್ನು ನೀಡಿದ್ದಾರೆ ಎಂದರೆ ಸರಿ. ಅದೇ ರೀತಿ ಸೈಟ್ ನಂ.54 ರಲ್ಲಿ ನನ್ನ ತಂದೆ ತ್ರಿವೇಣಿಯವರಿಗೆ ಒಂದು ಮನೆ ಕಟ್ಟಿಸಿಕೊಟ್ಟಿದ್ದಾರೆ ಎಂದರೆ ಸರಿ. ಮದುವೆಯಾದ ನಂತರ ನನ್ನ ತಂದೆ ರಾಮಯ್ಯ ಅವರಿಗೆ ಸ್ವಂತ ಫ್ಯಾಕ್ಟರಿ ಮಾಡಿ ಎಂದು ಧನ ಸಹಾಯ ಮಾಡಿದ್ದರು ಎಂದರೆ ಸರಿಯಲ್ಲ. ಆ ರೀತಿಯಾಗಿ ಧನ

ಸಹಾಯ ಮಾಡಿದ ಕಾರಣ ಚಿಕ್ಕದಾಗಿ ಒಂದು ಫ್ಯಾಕ್ಟರಿ ಶುರು ಮಾಡಿದ್ದರು ಎಂದರೆ ಸುಳ್ಳು. ರಾಮಯ್ಯ ಅವರು ತಿಂಗಳ ಸಂಬಳಕ್ಕೆ ಕೆಲಸ ಮಾಡುತ್ತಿದ್ದು ಅವರು ಉದ್ಧಾರ ಆಗಬೇಕು ಎಂಬ ಕಾರಣಕ್ಕಾಗಿ ನನ್ನ ತಂದೆ ಅವರಿಗೆ ಧನ ಸಹಾಯ ಮಾಡಿದ ಕಾರಣ ಅವರು ಫ್ಯಾಕ್ಟರಿ ಆರಂಭಿಸಿದ್ದರು ಎಂದರೆ ಸರಿಯಲ್ಲ.

26. ಸೈಟ್ ನಂ.14 ರಲ್ಲಿ 3 ಅಂತಸ್ತಿನ ಕಟ್ಟಡ ನನ್ನ ತಂದೆ ಕಟ್ಟಿಸಿಕೊಟ್ಟಿದ್ದು ಅದರಲ್ಲಿಯೂ ಸಹ ಸಾಕಷ್ಟು ಬಾಡಿಗೆ ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಒಂದು ಮಹಡಿ ಮಾತ್ರ ಕಟ್ಟಿಸಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಒಂದು ಮಹಡಿಯನ್ನು ಬಾಡಿಗೆಗೆ ನೀಡಿದ್ದಾರೆ ಎಂದು ನುಡಿಯುತ್ತಾರೆ.

27. ಮಾಲಾ ಅವರನ್ನು ನನ್ನ ತಾಯಿಯ ತಂದೆ ಲೆಂಕಪ್ಪ ಅವರ ಸಹೋದರಿ ನಂಜಮ್ಮ ಅವರ ಮೊಮ್ಮಗ ಕಮಲೇಶ್ ಅವರಿಗೆ ಮದುವೆ ಮಾಡಿ ನೀಡಲಾಗಿತ್ತು ಎಂದರೆ ಸರಿ. ಕಮಲೇಶ್ ಅವರು ಎಸ್.ಎಸ್.ಎಲ್.ಸಿ ಫೇಲ್ ಆಗಿದ್ದಾರೆ ಎಂದರೆ ನನಗೆ ಮಾಹಿತಿ ಇಲ್ಲ. ಆ ಬಗ್ಗೆ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮಾಲಾ ಅವರನ್ನು ಮದುವೆಯಾಗುವ ಸಂದರ್ಭದಲ್ಲಿ ಕಮಲೇಶ್ ಅವರು ಹಾಲು ಕರೆದು ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿ. ಅದೇ ರೀತಿ ಕಮಲೇಶ್ ಅವರು ಇಟ್ಟಿಗೆ ಗೂಡು, ಲಾರಿ, ರೇಷ್ಮೆ ನೂಲು ನೇಯುವ ಫ್ಯಾಕ್ಟರಿಯನ್ನು ಹಾಗೂ ಡ್ರೈ ಬ್ಯಾಟರಿ ಮ್ಯಾನುಫ್ಯಾಕ್ಚರಿಂಗನ್ನು ಮಾಡಿದ್ದಾರೆ ಎಂದರೆ ಸಾಕ್ಷಿ

ಮೊದಲ ಮೂರು ಕೆಲಸಗಳನ್ನು ಮಾಡಿದ್ದಾರೆ ಆದರೆ ಡ್ರೈ ಬ್ಯಾಟರಿ ಮ್ಯಾನುಫ್ಯಾಕ್ಚರಿಂಗನ್ನು ಮಾಡಿಲ್ಲ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ನನ್ನ ತಂದೆ ಕಮಲೇಶ್ ಅವರ ಪರಿಸ್ಥಿತಿಯನ್ನು ನೋಡಿ ಅವರಿಗೆ ಸಲಹೆ ಮತ್ತು ಧನ ಸಹಾಯ ಮಾಡಿ ಇಟ್ಟಿಗೆ ಗೂಡು, ಲಾರಿ ಹಾಗೂ ರೇಷ್ಮೆ ನೂಲಿನ ಫ್ಯಾಕ್ಟರಿ ಹಾಗೂ ಡ್ರೈ ಬ್ಯಾಟರಿ ಮ್ಯಾನುಫ್ಯಾಕ್ಚರಿಂಗನ್ನು ಮಾಡಿಸಿಕೊಟ್ಟಿದ್ದರು ಎಂದರೆ ಸರಿಯಲ್ಲ. ಕಮಲೇಶ್ ಅವರ ಕೆಟ್ಟ ಚಟಗಳು ಹಾಗೂ ಬೇಜವಾಬ್ದಾರಿಯಿಂದ ಮೇಲೆ ಹೇಳಿದ ಎಲ್ಲಾ ವ್ಯಾಪಾರಗಳಲ್ಲಿ ನಷ್ಟ ಉಂಟಾಗಿತ್ತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದರಿಂದ ನನ್ನ ತಂದೆಗೆ ಸಾಕಷ್ಟು ದುಃಖ ಆಗಿತ್ತು ಎಂದರೆ ಸರಿಯಲ್ಲ.

28. ಮಾಲಾ ಅವರು ರಾಜರಾಜೇಶ್ವರಿನಗರ ಸಿಎಂಸಿ ವಾರ್ಡ್ ನಂ.3 ರ ಕೌನ್ಸಿಲರ್ ಆಗಿದ್ದರು ಎಂದರೆ ಸಾಕ್ಷಿ ರಾಜರಾಜೇಶ್ವರಿನಗರ ಎಂದು ಈಗ ಆಗಿದೆ ಆದರೆ ಮೊದಲು ಪಟ್ಟಣಗೆರೆ ಎಂದು ಇತ್ತು ಎಂದು ನುಡಿಯುತ್ತಾರೆ. ಇದು ಸುಮಾರು 2000-2001 ನೇ ಇಸವಿಯಲ್ಲಿ ಆಗಿತ್ತು ಎಂದರೆ ಸರಿ. ಕೌನ್ಸಿಲರ್ ಅವಧಿ 5 ವರ್ಷ ಎಂದರೆ ಸರಿ. ಅವರು ಯಾವಾಗ ಕೌನ್ಸಿಲರ್ ಆಗಿದ್ದರೋ ಅದೇ ಕಾಲದಲ್ಲಿ ಹೇಮಂತ್ ಅವರು ಬೆಂಗಳೂರು ನಗರ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದರು ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ಕಮಲೇಶ್ ಅವರಿಗೆ ಕೌನ್ಸಿಲರ್ ಹುದ್ದೆಗೆ ಸ್ಪರ್ಧಿಸಬೇಕು ಎಂದು

ತುಂಬಾ ಆಸೆ ಇತ್ತು ಎಂದರೆ ಸರಿ. ಪಟ್ಟಣಗೆರೆ ಕೌನ್ಸಿಲರ್ ಸೀಟು ಹೆಂಗಸರಿಗೆ ಎಂದು ಮೀಸಲಾತಿ ಆಗಿತ್ತು ಎಂದರೆ ಸರಿ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

(ಪ್ರಶಾಂತಿ.ಜಿ)
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**